ಸಾಕ್ಷಿಯನ್ನು ದಿಃ 31-08-2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟಿ ಸವಾಲುಃ ಪ್ರತಿವಾದಿ ಪರಃ ಶ್ರೀ ಆರ್.ಎಸ್.ಜೆ. ವಕೀಲರಿಂದಃ**

ನಾನು ಶಂಕರ ಹೆಗಡೆ ರವರ ಕುಟುಂಬಕ್ಕೆ ಆಪ್ತನಾಗಿರುತ್ತೇನೆ. ಶಂಕರ ಹೆಗಡೆ ರವರು ನನ್ನ ತಾಯಿಯ ತಂದೆ. ಶಂಕರ ಹೆಗಡೆ ರವರು ದಾಖಲಾತಿಗಳನ್ನು ಮಾಡುವುದಿದ್ದಲ್ಲಿ ನನ್ನನ್ನು ಸಾಕ್ಷಿದಾರರನ್ನಾಗಿ ಕರೆಯುತ್ತಿದ್ದರಾ ಎಂದರೆ ಸಾಕ್ಷಿಯು ಮರಣ ಶಾಸನದ ದಾಖಲಾತಿಗೆ ಮಾತರ್ರ ಸಾಕ್ಷಿದಾರರನ್ನಾಗಿ ಕರೆದಿದ್ದು, ಇತರ ಯಾವುದೇ ದಾಖಲಾತಿಗಳಿಗೆ ಸಾಕ್ಷಿದಾರರನ್ನಾಗಿ ಕರೆದಿರುವುದಿಲ್ಲ ಎಂದು ನುಡಿದಿರುತ್ತಾರೆ. ಶಂಕರ ಹೆಗಡೆ ರವರ ಕುಟುಂಬದಲ್ಲಿ ವಾಂಟಣಿ ಆದ ಬಗ್ಗೆ ನನಗೆ ಸ್ವಲ್ಪ ಸ್ವಲ್ಪ ಮಾಹಿತಿ ಇದ್ದು, ಸಂಪೂರ್ಣ ಮಾಹಿತಿ ಇರುವುದಿಲ್ಲ. ದಿಃ 18-05-2005 ರಂದು ಶಂಕರ ಹೆಗಡೆ ರವರ ಕುಟುಂಬಕ್ಕೆ ಸಂಬಂಧಪಟ್ಟಂತೆ ಎಷ್ಟು ಕಾಗದ ಪತ್ರಗಳು ಆಗಿವೆ ಎಂದರೆ ನನಗೆ ಮಾಹಿತಿ ಇರುವಂತೆ ಎರಡು ಕಾಗದ ಪತ್ರ ಆಗಿವೆ ಎಂದು ನುಡಿಯುತ್ತಾರೆ. ಸದರಿ ದಿನಾಂಕದಂದು ಬೆಳಿಗ್ಗೆ ದೇಣಿಗೆಗೆ (ದಾನ) ಸಂಬಂಧಪಟ್ಟಂತೆ ಒಂದು ದಾಖಲಾತಿ ಆಗಿದ್ದು, ಮತ್ತೊಂದು ದಾಖಲಾತಿ ಮರಣ ಶಾಸನ ಆಗಿರುತ್ತದೆ. ಮರಣ ಶಾಸನವನ್ನು ಮಧ್ಯಾಹ್ನದ ವೇಳೆಗೆ ಮಾಡಲಾಗಿದ್ದು ನಿಜವಾದ ಸಮಯ ಹೇಳಲು ಆಗುವುದಿಲ್ಲ.

ಶಂಕರ ಹೆಗಡೆ ರವರು ವಿಲುನಾಮೆ ಯನ್ನು ತಯಾರಿಸಲು ಮಾಹಿತಿಯನ್ನು ಎಷ್ಟು ಗಂಟೆಗೆ ನೀಡಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಉಪನೊಂದಣಾಧಿಕಾರಿಗಳ ಕಚೇರಿಗೆ ಹೋದಾಗ ನನ್ನೊಂದಿಗೆ ನನ್ನ ಅಜ್ಜ ಶಂಕರ ಹೆಗಡೆ,ಅಜ್ಜಿ ಗಿರಿಜಾ ಹೆಗಡೆ ಇದ್ದರು. ಸಾಕ್ಷಿಗೆ ನಿಪಿ.26 ರ 1,2 ಮತ್ತು 3 ನೇ ಪುಟಗಳನ್ನು ತೋರಿಸಿ **"ಈ ಎ.ಹೆ. ಗು. ಶಂಕರ ಗಣೇಶ ಹೆಗಡೆ ಅವರದು"** ಎಂಬುದನ್ನು ಯಾರು ಬರೆದಿರುತ್ತಾರೆ ಎಂದು ನನಗೆ ತಿಳಿದಿಲ್ಲ. ನಿಪಿ.26 ರಲ್ಲಿ 1,2 ಮತ್ತು 3 ಪುಟಗಳಲ್ಲಿ "ಈ ಎ.ಹೆ. ಗು. ಶಂಕರ ಗಣೇಶ ಹೆಗಡೆ ಅವರದು" ಎಂದು ನಮೂದಿಸಿರುವ ಸ್ಥಳದ ಪಕ್ಕದಲ್ಲಿ ಇರುವ ಹೆಬ್ಬೆಟ್ಟಿನ ಗುರುತು ಯಾರದ್ದು ಎಂದು ಹೇಳಲು ಆಗುತ್ತದಾ ಎಂದರೆ ಸಾಕ್ಷಿಯ ಸದರಿ ದಾಖಲಾತಿಯ ಪುಟಗಳನ್ನು ನೋಡಿ ದಾಖಲಾತಿಯಲ್ಲಿ ಅದನ್ನು ಗುರುತಿಸಲು ಆಗುವಂತೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಹೆಬ್ಬೆಟ್ಟಿನ ಗುರುತು ಕಂಡು ಬರದೇ ಇದ್ದರೂ ಸದರಿ ಹೆಬ್ಬೆಟ್ಟಿನ ಗುರುತು ಶಂಕರ ಹೆಗಡೆ

ರವರದ್ದು ಆಗಿರುವುದಾಗಿ ಹಾಗೂ ಹೆಬ್ಬೆಟ್ಟಿನ ಗುರುತನ್ನು ನನ್ನ ಸಮಕ್ಷಮ ಹಾಕಿರುತ್ತಾರೆ ಎಂದು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಗಿರಿಜಾ ಶಂಕರ ಹೆಗಡೆ ರವರು ಸಹಿ ಮಾಡುತ್ತಿದ್ದರು. ನಿಪಿ.26 ನ್ನು ಮಾಡುವ ಪೂರ್ವದಲ್ಲಿ ಶಂಕರ ಹೆಗಡೆ ರವರು ಮರಣ ಶಾಸನ ಮಾಡಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಮರಣ ಶಾಸನವನ್ನು ರದ್ದು ಪಡಿಸಿರುವ ಬಗ್ಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ನಿಪಿ.26 ಕ್ಕೂ ಪೂರ್ವದ್ದಿದ್ದ ಮರಣ ಶಾಸನವನ್ನು ರದ್ದುಪಡಿಸಿ, ನಿಪಿ.26 ರ ಮರಣ ಶಾಸನವನ್ನು ಬರೆಯುತ್ತಿರುವುದಾಗಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.26 ಕ್ಕೂ ಪೂರ್ವದ ಮರಣ ಶಾಸನವನ್ನು ರದ್ದು ಪಡಿಸಿದ ಬಗ್ಗೆ ಪ್ರತ್ಯೇಕ ದಾಖಲಾತಿ ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಶಂಕರ ಹೆಗಡೆ ರವರು ಮರಣ ಶಾಸನವನ್ನು ಬರೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.26 ನ್ನು ವಾದಿಯೊಂದಿಗೆ ಸೇರಿಕೊಂಡು ಸೃಷ್ಟಿಪಡಿಸಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಕುಮಟಾ